'ಮೇಳದವರ ಹಿಂದೆ ತಿರುಗಾಡುವ ಕೆಲಸವಿಲ್ಲದ ಮಳೆಗಾಲದ ದಿನಗಳಲ್ಲಾದರೂ ಮನೆಯಲ್ಲೇ ಇದ್ದು ಆ ತೋಟದ ಹೊಳೆ ಬದಿಯ ದಂಡೆ ಸ್ವಲ್ಪ ಬಲಪಡಿಸಿ ಆಸ್ತಿಯನ್ನು ಕಾಯ್ದುಕೊಳ್ಳುವ ಕೆಲಸ ಮಾಡಬಾರದೇ' ಎಂದರೆ ಹೇಳುವುದನ್ನೆಲ್ಲ ಕೇಳಿಸಿಕೊಂಡು, 'ಇನ್ನಾದರೂ ಒಳ್ಳೆಬುದ್ಧಿ ಬಂತೇನೋ' ಎಂದು ಆ ಹೆಂಡತಿ ಇವರತ್ತ ಆಸೆಯಿಂದ ನೋಡುತ್ತಿರುವಂತೆಯೇ ಟವೆಲನ್ನು ಝಾಡಿಸುತ್ತ ಉಟ್ಟ ಬಟ್ಟೆಯಲ್ಲೇ ಹೊರಟು ಬಿಡುತ್ತಿದ್ದರು. ಮತ್ತೆ ಹತ್ತೋ ಹದಿನೈದೋ ದಿನಗಳ ನಂತರ ವಾಪಸು ಬರುವ ಅವರ ಸವಾರಿ ಉಸ್ಸಪ್ಪ ಎನ್ನುತ್ತ ಚಾವಡಿಯ ಕಂಬಕ್ಕೆ ಒರಗುತ್ತಾ 'ಆಹ್...' ಎನ್ನುತ್ತ ಬೆಣ್ಣೆಕೊಪ್ಪದ ನರಸಿಂಹಯ್ಯನ ಮನೆಯಲ್ಲಿನ ತಾಳ ಮದ್ದಲೆಯ ಪ್ರಸಂಗವನ್ನೋ, ಮಾವಿನ ಮರಡಿಯ ಶಂಕರಪ್ಪನ ಮನೆಯಲ್ಲಿ ರಾತ್ರಿಯಿಡೀ ನಡೆದ ತಾಳಮದ್ದಲೆ, ಪ್ರಸಂಗದುದ್ದಕ್ಕೂ ಅವರು ವ್ಯವಸ್ಥೆಗೊಳಿಸಿದ್ದ ಉಪ್ಪಿಟ್ಟು ಅವಲಕ್ಕಿಯ ಸಮಾರಾಧನೆ ಬಗ್ಗೆಯೋ ಹೇಳುತ್ತ ಕುಳಿತರೆ ಮುಗಿಯಿತು. ಯಕ್ಷಗಾನವಿಲ್ಲದಿದ್ದರೆ ತಾಳಮದ್ದಲೆ ಅದೆರಡೂ ಇಲ್ಲದಿದ್ದರೆ ಮನೆಯ ಚಾವಡಿ ಕಂಬಕ್ಕೊರಗಿ ತಾಂಬೂಲ ಮೆಲ್ಲುವುದು. ಇದು ಬಿಟ್ಟರೆ ಬೇರೆ ಕೆಲಸದ ಚಿಂತೆಯೇ ಇಲ್ಲ ಅವರಿಗೆ. ಅವರನ್ನು ಮದುವೆ ಮಾಡಿಕೊಂಡ ತಪ್ಪಿಗೆ ಮತ್ತು ಆ ತಪ್ಪಿನ ಮುಂದುವರಿದ ಭಾಗವಾದ ಮಕ್ಕಳನ್ನು ಹೆರುವುದನ್ನೂ ಮಾಡಿದ್ದರಿಂದ ಈಗ ಅವುಗಳನ್ನೂ ಕಟ್ಟಿಕೊಂಡು ಏಗುವ ಕೆಲಸ ಅವರ ಹೆಂಡತಿ ವಾಗ್ದೇವಿಯದ್ದು.

★★★

ನೂರೈವತ್ತು ತೆಂಗಿನ ಮರಗಳ ತೋಟ, ಒಂದು ಹತ್ತಿಪ್ಪತ್ತು ಮುಡಿ ಗದ್ದೆ ಇದೆ. ಒಬ್ಬನೇ ಮಗ. ಹೈಸ್ಕೂಲು ವರೆಗೆ ಓದಿದ್ದಾನೆ ಎಂದು ಅಪ್ಪ ಮನೆಗೆ ಬಂದವರು ಹೇಳುತ್ತಿದ್ದಾಗ ಆಗಲೇ ಪ್ರಾಯ ತುಂಬಿದ್ದ ವಾಗ್ದೇವಿ ಬಾಗಿಲ ಸಂದಿಯಿಂದಲೇ ಕೇಳಿಸಿಕೊಳ್ಳುತ್ತ ಸಂತೋಷ ಪಟ್ಟಿದ್ದಳು. ಗೆಳತಿಯರೊಂದಿಗೆ ಪಕ್ಕದ ದೇವಸ್ಥಾನಕ್ಕೆ ಹೋಗುವಾಗ ಬರುವಾಗ ಮತ್ತು ಅಲ್ಲಿ ಮಂಗಳಾರತಿಗಾಗಿ ಕಾಯುತ್ತಿರುವಾಗಲೂ ಇದೇ ಮಾತು. ನಾಲ್ಕು ಮನೆಗಳಾಚೆಯ ಲಲಿತಳಂತೂ ಮದುವೆಯಾದವರಿಗಿಂತ ಹೆಚ್ಚಾಗಿ ಮದುವೆಯ ಮುಂದಿನ ವಿಷಯಗಳ ಬಗ್ಗೆ ಮಾತಾಡುವಾಗ ಇವರೆಲ್ಲ ಬಾಯಿಯಲ್ಲಿ ಛೀ... ಥೂ... ಎಂದು ಹೇಳುತ್ತಿದ್ದರೂ ಮೈಯೆಲ್ಲಾ ಕಿವಿಯಾಗಿ ಕೇಳಿಸಿಕೊಳ್ಳುತ್ತಿದ್ದರು. ಅದನ್ನೆಲ್ಲ ತಲೆ ತುಂಬ ತುಂಬಿಕೊಂಡು ಮನಸ್ಸಿನಲ್ಲಿಯೇ ಮೆಲುಕು ಹಾಕುತ್ತಿದ್ದ ವಾಗ್ದೇವಿಗೆ ಈಗ ಅಪ್ಪ ಹೇಳುತ್ತಿದ್ದ ಮಾತುಗಳೆಲ್ಲ ಅಮೃತಧಾರೆ. ಅಮ್ಮನಿಗೆ ಮಾತ್ರ ಅಪ್ಪ ಹೇಳಿದ್ದಕ್ಕೆಲ್ಲ ಹೂಂಗುಟ್ಟುವುದಷ್ಟೇ ಕೆಲಸ.

ಈ ಹಿಂದೆ ಬಹಳ ಸಾರಿ ಹೊಳೆಯೀಚೆಯ ಊರಿನವರಿಗೆ ಅರ್ಧ ದ್ವೀಪದಾಕಾರದಲ್ಲಿದ್ದ ಆಚೆ ಭಾಗದಿಂದ ಸಂಬಂಧದ ಪ್ರಸ್ತಾಪಗಳು ಬಂದಿದ್ದಿತ್ತು. ಆಗೆಲ್ಲ ಈ ಊರಿನವರದು ಒಂದೇ ಮಂತ್ರ 'ಸಮುದ್ರ ಹುಚ್ಚೆದ್ದು ಕುಣಿದರೆ ಮುಳುಗಿ ಹೋಗುವ ಆ ಊರಿಗೆ ಹೆಣ್ಣುಕೊಟ್ಟರೆ ನಮ್ಮ ಮಗಳೂ ಮುಳುಗಿ ಹೋದಂತೆ. ಅದಕ್ಕಿಂತ ನಾವೇ ನಮ್ಮ ಹೆಣ್ಣು ಮಕ್ಕಳನ್ನು ಬಾವಿಗೆ ತಳ್ಳುವುದೊಳ್ಳೆಯದು' ಎಂಬಂಥ ಮಾತುಗಳನ್ನಾಡುತ್ತಿದ್ದರು. ಹಾಗಿರುವಾಗ ತೋಟ ಗದ್ದೆಗಳ ಆಕರ್ಷಣೆಯೇ ವಾಗ್ದೇವಿಯ ಅಪ್ಪನನ್ನು 'ಹೊಳೆಯಾಚಿನ ಊರಿನವರಿಗೆ ಹೆಣ್ಣು ಕೊಡುವುದಿಲ್ಲ' ಎನ್ನುವ ನಿರ್ಧಾರವನ್ನು ಸಡಿಲಿಸುವಂತೆ ಮಾಡಿದ್ದು.

ಮುಂದೆಲ್ಲ ಮದುವೆಯ ತಯಾರಿ. ಹಪ್ಪಳ ಸಂಡಿಗೆ ಮಾಡುವುದರಿಂದ ಹಿಡಿದು ಬೇಳೆ ಕಾಳುಗಳನ್ನು ಸರಿಪಡಿಸುವುದರ ವರೆಗೆ ಕೆಲಸ ಕೆಲಸ... ಊರವರೆಲ್ಲ ಸೇರಿದ್ದರು. ನೂರೈವತ್ತು ಮರಗಳಿದ್ದ ತೆಂಗಿನ ತೋಟದ ಯಜಮಾನನ ಮಗನ ಸಂಬಂಧವೆಂದರೇನು ಸಾಮಾನ್ಯವೇ.